ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ.ಕೃಇ/ಆತ್ಮ/ಆಯುಕ್ತರು/ನೇಮಕಾತಿ-2014-15

ಕೃಷಿ ನಿರ್ದೇಶನಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕ:15.09.2014.
17

## ಕಛೇರಿ ಆದೇಶ

ವಿಷಯ: ಆತ್ಮ ಯೋಜನೆಯಲ್ಲಿ ರಾಜ್ಯ ಆತ್ಮ ಸಂಯೋಜಕರು ಮತ್ತು ಲಿಂಗತ್ವ ಸಂಯೋಜಕರು ಹುದ್ದೆಯನ್ನು ಗುತ್ತಿಗೆ ಆಧಾರಿತ ಸೇವೆಯಲ್ಲಿ ನೇಮಿಸುವ ಕುರಿತು.

*******

ಕೇಂದ್ರ ಸರ್ಕಾರದ ದಿ:03.03.2014 ಪ್ರಕಾರ ATMA ಯೋಜನೆ 2010ರ ಮಾರ್ಗಸೂಚಿನ್ವಯ ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಗುತ್ತಿಗೆ ಆಧಾರಿತ ಸೇವೆಯನ್ನು ಕ್ಷೇತ್ರಮಟ್ಟದ ತಾಂತ್ರಿಕ ಸಿಬ್ಬಂದಿ ಹಾಗೂ Computer Programmer ಹುದ್ದೆಗಳನ್ನು 2014-15 ರಿಂದ ಮಾರ್ಪಾಡು ಮಾಡಿ ಜಿಲ್ಲಾ ಆಯ್ಕೆ ಸಮಿತಿ ಮೂಲಕ ನಿಯೋಜಿಸುವ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಹಾಗೆಯೇ 2014-15 ರಿಂದ ರಾಜ್ಯಮಟ್ಟದಲ್ಲಿ ATMA ಘಟಕಕ್ಕೆ ಹಾಲಿಯಿರುವ ಒಂದು ರಾಜ್ಯ(ಆತ್ಮ)ಸಂಯೋಜಕರು ಹುದ್ದೆಯ ಜೊತೆಗೆ ಹೆಚ್ಚುವರಿಯಾಗಿ ಒಂದು ಲಿಂಗತ್ವ ಸಂಯೋಜಕರು ಹುದ್ದೆಯನ್ನು ಕೂಡ ಗುತ್ತಿಗೆ ಆಧಾರಿತ ಸೇವೆಯಲ್ಲಿ ಪಡೆದುಕೊಳ್ಳಲು ಅನುಮತಿ ನೀಡಲಾಗಿದೆ.

ರಾಜ್ಯ ಆತ್ಮ ಸಂಯೋಜಕರು ರಾಷ್ಟ್ರ ಮಟ್ಟದಲ್ಲಿ ಕೃಷಿ ಸಚಿವಾಲಯದೊಡನೆಯೂ, ರಾಜ್ಯ ಮಟ್ಟದಲ್ಲಿ ಸಮೇತಿ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳೊಡನೆಯು ಮತ್ತು ಜಿಲ್ಲಾ ಮಟ್ಟದಲ್ಲಿ ಕೃಷಿ ಸಂಬಂದಿತ ಇಲಾಖೆಗಳೂ ಸೇರಿದಂತೆ ಆತ್ಮಗಳೊಡನೆ ಸಮನ್ವಯತೆಯನ್ನು ಸಾಧಿಸುವುದು. ಜಿಲ್ಲಾ ಕೃಷಿ ಯೋಜನೆ, ಜಿಲ್ಲಾಕೃಷಿ ವಿಸ್ತರಣಾ ಯೋಜನೆ ಇತ್ಯಾದಿಗಳನ್ನು ರಾಜ್ಯ ಯೋಜನೆಯನ್ನಾಗಿ ಕ್ರೋಢಿಕರಿಸುವುದು. ಪ್ರಗತಿಯ ಕ್ರೋಢೀಕರಣ ಮಾಡಿ ಸಕಾಲದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ವರದಿ ಸಲ್ಲಿಸುವುದು. ಕೃಷಿ ಮತ್ತು ಸಂಬಂಧಿತ ಇಲಾಖೆಗಳ ಸಾಮರ್ಥ್ಯಾಭಿವೃದ್ಧಿಯನ್ನು ವಿಶ್ಲೇಷಿಸುವುದು ಪ್ರಮುಖವಾಗಿದೆ. ಇವರೊಂದಿಗೆ ರಾಜ್ಯ ಮಟ್ಟದಲ್ಲಿ ಲಿಂಗತ್ವ ಸಂಯೋಜಕರು ಮಹಿಳಾ ರೈತರಿಗೆ ಎಲ್ಲಾ ಯೋಜನೆಗಳಿಂದಲೂ ಪ್ರಯೋಜನ ದೊರಕುವಂತೆ ಮಾಡುವುದು ಮುಖ್ಯವಾಗಿರುತ್ತದೆ. ಒಟ್ಟಾರೆ ಮಾಹಿತಿಯಲ್ಲಿ ಸ್ತ್ರಿಯರಿಗೆ ಸಂಬಂಧಪಟ್ಟ ಮಾಹಿತಿಯನ್ನು ಬೇರ್ಪಡಿಸಿ ಪಡೆಯುವುದು ಹಾಗೂ ಮುಖ್ಯ ಒತ್ತು ವಿಷಯಗಳಲ್ಲಿ ಅಧ್ಯಾಯನಗಳನ್ನು ಮತ್ತು ಪ್ರಸ್ತುತ ಸಂಶೋಧನೆಗಳನ್ನು ಕೈಗೊಳ್ಳುವುದು. ರೈತ ಮಹಿಳೆಯರ ಆಹಾರ ಭಧ್ರಾತಾ ಗುಂಪುಗಳನ್ನು ಪ್ರೋತ್ಸಾಹಿಸುವುದು ಹಾಗೂ ಮನೆಮನೆಯಲ್ಲೂ ಆಹಾರ ಭಧ್ರತೆ ಉಂಟಾಗುವ ರೀತಿಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು. ರೈತ ಮಹಿಳೆಯರಿಗೆ ಸಂಬಂಧಿಸಿದಂತೆ ಯಶೋಗಾಥೆಗಳು/ಅನುಸರಿಸಿದ ಅತ್ಯುತ್ತಮ ಪದ್ಧತಿಗಳು/ಭಾಗವಹಿಸುವಿಕೆ ಮುಂತಾದವುಗಳನ್ನು ದಾಖಲಿಸುವುದು. ರೈತ ಮಹಿಳೆಯರ ಕೃಷಿ ಮತ್ತು ಸಂಬಂಧಿತ ಇತರ ಎಲ್ಲಾ ವಲಯಗಳಲ್ಲಿನ ಅವಶ್ಯಕತೆಗಳನ್ನು ತಾಲ್ಲೂಕುವಾರು ದಾಖಲಿಸುವುದು ಹಾಗೂ ಅವುಗಳ ಆದ್ಯತೆಯನ್ನು ಗುರುತಿಸುವುದು. ಜಿಲ್ಲಾ ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳ ಉಸ್ತುವಾರಿಯಲ್ಲಿ ವಿಶೇಷ ಗಮನ ವಹಿಸಿ, ಮಹಿಳೆಯರ ಸಬಲೀಕರಣಕ್ಕಾಗಿ ಇತರ ಇಲಾಖೆಗಳ ಜೊತೆ ಸಮನ್ವಯತೆಯನ್ನು ಸಾಧಿಸಲು ಕ್ರಮ ವಹಿಸುವುದು.

ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರವು 2014-15ರಲ್ಲಿ ರಾಜ್ಯ ಸಂಯೋಜಕರ ವೇತನವನ್ನು ಮಾಹೆಯಾನ ರೂ.50,000/ ಮತ್ತು ಲಿಂಗತ್ವ ಸಂಯೋಜಕರ ಹುದ್ದೆಗೆ ಮಾಹೆಯಾನ ರೂ.40,000/ ನಿಗಧಿಪಡಿಸಲಾಗಿದ್ದು ಈ ಹುದ್ದೆಗಳನ್ನು ಗುತ್ತಿಗೆ ಆಧಾರಿತ ಸೇವೆಯಲ್ಲಿ ಪಡೆದುಕೊಳ್ಳಲು ಸೂಚಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಈ ಹುದ್ದೆಗಳನ್ನು ಆಯ್ಕೆ ಮಾಡುವ ಸಂಬಂಧ ಈ ಕೆಳಕಂಡ ರಾಜ್ಯಮಟ್ಟದ ಸಮಿತಿಯನ್ನು ರಚಿಸಲಾಗಿದೆ.

1. ಕೃಷಿ ನಿರ್ದೇಶಕರು, ಕೃಷಿ ಇಲಾಖೆ ........ ಅಧ್ಯಕ್ಷರು
2. ನಿರ್ದೇಶಕರು,ಸಮೇತಿ ಹಾಗೂ ವಿಸ್ತರಣಾ ನಿರ್ದೇಶಕರು ಕೃ.ವಿ.ವಿ.ಬೆಂಗಳೂರು. ........ ಸದಸ್ಯರು
3. ಅಪರ ಕೃಷಿ ನಿರ್ದೇಶಕರು, ಮಾಸಂಅ,ಬೆಂಗಳೂರು ........ ಸದಸ್ಯರು
4. ಜಂಟಿ ಕೃಷಿ ನಿರ್ದೇಶಕರು (ವಿಸ್ತರಣಾ,ತರಬೇತಿ&ಈ-ಗವರನ್ಸ್),ಬೆಂಗಳೂರು. ......... ಸದಸ್ಯರು ಕಾರ್ಯದರ್ಶಿ

ಮುಂದಿನ ಪುಟಕ್ಕೆ.....

ಈ ಸಮಿತಿಯು ಕೆಳಕಂಡ ಅಂಶಗಳನ್ನು ಪಾಲಿಸುವುದು.

1. ಆಯ್ಕೆ ಸಮಿತಿಯು ಈ ಹುದ್ದೆಗಳನ್ನು ಗುತ್ತಿಗೆ ಆಧಾರಿತ ನೇಮಕಾತಿಗಾಗಿ ದಿ:30.09.2014ರ ಒಳಗಾಗಿ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು.
2. ನೇರ ಸಂದರ್ಶನದ ನೇಮಕಾತಿ ಪ್ರಕಟಣೆಯನ್ನು ರಾಜ್ಯಮಟ್ಟದ ದಿನಪತ್ರಿಕೆಗಳಲ್ಲೂ ಹಾಗೂ ಕೃಷಿ ಇಲಾಖೆಯ Websiteನಲ್ಲೂ ತ್ವರಿತವಾಗಿ ಪ್ರಕಟಿಸುವುದು. ಈ ಪ್ರಕಟಣೆಯನ್ವಯ ಅಭ್ಯರ್ಥಿಗಳಿಗೆ ದಿ:30.09.2014 ರಂದು ನೇರ ನೇಮಕಾತಿ ಮೂಲಕ ಅನುಬಂಧ–1ರಲ್ಲಿರುವಂತೆ ಕ್ರಮ ಕೈಗೊಳ್ಳುವುದು.
3. ಸದಸ್ಯ ಕಾರ್ಯದರ್ಶಿಯು ದಿ:30.09.2014 ರಂದು ಬೆಳಿಗ್ಗೆ 10 ರಿಂದ 12 ರವರೆಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಪಡೆದು 12.00 ರಿಂದ 1.30 ರವರೆಗೆ ಪರಿಶೀಲಿಸಿ ಅರ್ಹತೆ ಹೊಂದಿದ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯ ಮುಂದೆ ಅದೇ ದಿನ ಮದ್ಯಾಹ್ನ 3.00 ಗಂಟೆಯ ನಂತರ ಆಹ್ವಾನಿಸಲು ಕ್ರಮ ಕೈಗೊಳ್ಳುವುದು.
4. ಆಯ್ಕೆ ಸಮಿತಿಯು ಅಭ್ಯರ್ಥಿಯ ದಾಖಲಾತಿಗಳನ್ವಯ ಪರಿಶೀಲನೆ ಮತ್ತು ನೇರ ಸಂದರ್ಶನದ ಅಭಿಪ್ರಾಯದೊಂದಿಗೆ ಅನುಬಂಧ–4ರಂತೆ ಆಯ್ಕೆಯನ್ನು ಪೂರ್ಣಗೊಳಿಸಿ ದೃಢೀಕರಿಸಬೇಕು.
5. ಆಧ್ಯತೆ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯ ಪ್ರಕಾರ ಮೊದಲನೇ ಸ್ಥಾನದಲ್ಲಿರುವ ಅಭ್ಯರ್ಥಿಗೆ ಕೃಷಿ ಆಯುಕ್ತರು ನೇಮಕಾತಿ ಆದೇಶವನ್ನು ಗುತ್ತಿಗೆ ನಿಯಮಾವಳಿಯನ್ವಯ(ಅನುಬಂಧ–5)ನೀಡುವಲ್ಲಿ ಸದಸ್ಯ ಕಾರ್ಯದರ್ಶಿಯು ಕ್ರಮ ವಹಿಸುವುದು.
6. ಒಂದು ವೇಳೆ ಮೊದಲನೇ ಸ್ಥಾನದ ಅಭ್ಯರ್ಥಿಯು ನೇಮಕಾತಿ ಆದೇಶ ನೀಡಿದಾಗ್ಯೂ ಅಂತಿಮ ದಿನಾಂಕದೊಳಗಾಗಿ ವರದಿ ಮಾಡಿಕೊಳ್ಳದಿದ್ದಲ್ಲಿ ಅವರ ನಂತರದ ಸ್ಥಾನದಲ್ಲಿರುವ(ಕಾಯ್ದಿಟ್ಟ ಪಟ್ಟಿ ಪ್ರಕಾರ)ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ನೀಡಲು ಕ್ರಮ ವಹಿಸುವುದು.

ಮೇಲೆ ವಿವರಿಸಿರುವ ಅಂಶಗಳನ್ವಯ ಸದರಿ ವಿಷಯದಲ್ಲಿ ಸೂಚಿಸಿರುವಂತೆ ಆತ್ಮ ಯೋಜನೆಯ ರಾಜ್ಯಮಟ್ಟದಲ್ಲಿನ ಎರಡು ಹುದ್ದೆಗಳ ಗುತ್ತಿಗೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು ಸಂಬಂಧಿಸಿದ ಸದಸ್ಯ ಕಾರ್ಯದರ್ಶಿಯ ಆದ್ಯ ಜವಬ್ದಾರಿಯಾಗಿರುವುದಾಗಿ ಈ ಮೂಲಕ ಸೂಚಿಸಲಾಗಿದೆ.

17.9.14

ಕೃಷಿ ಆಯುಕ್ತರು ಹಾಗೂ
ರಾಜ್ಯ ನೋಡಲ್ ಅಧಿಕಾರಿ, ಆತ್ಮ

**ಪ್ರತಿಯನ್ನು ಆದರ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ:**
1.ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ:**
1. ಕೃಷಿ ನಿರ್ದೇಶಕರು, ಕೃಷಿ ಇಲಾಖೆ,ಬೆಂಗಳೂರು.
2. ನಿರ್ದೇಶಕರು,ಸಮೇತಿ ಹಾಗೂ ವಿಸ್ತರಣಾ ನಿರ್ದೇಶಕರು ,ಕೃ.ವಿ.ವಿ.ಬೆಂಗಳೂರು.
3. ಅಪರ ಕೃಷಿ ನಿರ್ದೇಶಕರು, ಮಾಸಂಅ,ಬೆಂಗಳೂರು.
4. ಜಂಟಿ ಕೃಷಿ ನಿರ್ದೇಶಕರು,(ವಿಸ್ತರಣಾ, ತರಬೇತಿ & ಈ–ಗವರನ್ಸ್),ಬೆಂಗಳೂರು.